
REVIEW OF RESEARCH
IMPACT FACTOR : 5.7631(UIF) UGC APPROVED JOURNAL NO. 48514 ISSN: 2249-894X
VOLUME - 8 | ISSUE - 3 | DECEMBER - 2018

# ನಿರಂಜನರ 'ಮಿಂಚು'– ಒಂದು ರಾಜಕೀಯ ಮುನ್ನೋಟ



ಡಾ. ಪ್ರೇಮಲತ. ಹೆಚ್.ಎಸ್.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಕೊಳ್ಳೇಗಾಲ.

ನಿರಂಜನರ "ಕೊನೇ ನಮಸ್ಕಾರ" ಕಾದಂಬರಿಯ ಮುಂದಿನ ಭಾಗವಾಗಿ 1960 ರಲ್ಲಿ "ತೊಟ್ಟಿಲು ತೂಗದ ಕೈ" ಕೃತಿಯು ಪ್ರಜಾಮತ ಸಾಪ್ತಾಹಿಕದಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು "ತೊಟ್ಟಿಲು ತೂಗದ ಕೈ"ಯನ್ನು ಪುಸ್ತಕ ರೂಪದಲ್ಲಿ ಹೊರತರಲು ಪ್ರಕಾಶಕರೊಬ್ಬರಿಗೆ ನೀಡಿದ ನಿರಂಜನರು ಅದರ ಹಸ್ತ ಪ್ರತಿ ಬೆಂಕಿ ತಗಲಿ ನಾಶವಾಯಿತೆಂಬ ಉತ್ತರ ಪಡೆದರು. ಮುಂದೆ 27 ವರ್ಷಗಳ ನಂತರ ತಾವು ಹಿಂದೆ ರಚಿಸಿದ್ದ ತೊಟ್ಟಿಲು ತೂಗದ ಕೈ ಕಾದಂಬರಿಯನ್ನು 1987 ರಲ್ಲಿ ಪುನರ್ ಸೃಷ್ಟಿ ಮಾಡಿ ಅದಕ್ಕೆ "ಮಿಂಚು" ಎಂಬ ಹೊಸ ಹೆಸರನ್ನಿಟ್ಟರು. "ಒಂದೇ ವಸ್ತುವುಳ್ಳ ಕೃತಿಯನ್ನು ಕಾಲು ಶತಮಾನಗಳ ನಂತರ ಸೃಷ್ಟಿಸಿದರೆ ಹೇಗಿರುತ್ತದೆ ಎಂಬುದನ್ನು ಅಭ್ಯಸಿಸಲು ತೊಟ್ಟಿಲು ತೂಗದ ಕೈಯ ಮುದ್ರಿತ ಹಾಳೆಯೋ ಹಸ್ತ ಪ್ರತಿಯೋ ಮುಂದೆ ದೊರೆತರೆ ಸಹಕಾರಿಯಾಗುತ್ತದೆ"1 ಎಂದು ನಿರಂಜನರು "ಮಿಂಚು" ಕಾದಂಬರಿಯ ಮುನ್ನುಡಿಯಲ್ಲಿ ತಿಳಿಸಿದ್ದಾರೆ.

ಅನಾಥಾಶ್ರಮದಿಂದ ಹೊರಬಂದ ಅಸಾಧ್ಯ ಹೆಣ್ಣು ಪುಟ್ಟವ್ವ ತನ್ನ ಪ್ರತಿಯೊಂದು ಸೋಲು ಗೆಲುವಿನತ್ತ ಸಾಗುವ ಸೋಪಾನವೆಂಬ ಮನೋಭಾವನೆಯಿಂದ ಮುಂಬಯಿಯತ್ತ ಪ್ರಯಾಣ ಮಾಡಿ ಫಿನಿಕ್ಸನಂತೆ ಮರುಹುಟ್ಟು ಪಡೆಯುತ್ತಾಳೆ. ಅನಂತರ ರಾಜಕೀಯ ಕ್ಷೇತ್ರದ ಧ್ರುವತಾರೆಯಾಗಿ ಮೆರೆದು ದುರಂತ ಹೊಂದುವ ಚಿತ್ರಣವು ಈ ಕಾದಂಬರಿಯ ಪ್ರಮುಖ ವಸ್ತುವಾಗಿದೆ. ಮಹಿಳೆಯೊಬ್ಬಳ ರಾಜಕೀಯ ಪ್ರವೇಶದ ಅನುಭವದ ಜೊತೆಗೆ ಸಾಮಾಜಿಕ ಕಾಳಜಿಯ ಹಿನ್ನೆಲೆಯಲ್ಲಿ ಸ್ಥಾಪನೆಯಾಗಿರುವ ಅನಾಥಾಶ್ರಮಗಳ ಅನೈತಿಕ ಚಟುವಟಿಕೆಗಳನ್ನು ಕಾದಂಬರಿಯಲ್ಲಿ ಅನಾವರಣಗೊಳಿಸಲಾಗಿದೆ. ಮೃದುಲಾಬೆನ್‌ಳ ಶಿಷ್ಯೆಯಾಗಿ ಪುಟ್ಟವ್ವನ ಗತಜೀವನದ ನೆನಪುಗಳು, ಅನಾಥಾಶ್ರಮದಲ್ಲಿ ಜುಮ್ಮಿಯಂತಹ ಹೆಣ್ಣು ಮಗಳ ಪಾಲನೆಯ ಹಿಂದೆ ಇರುವ ದುರುದ್ದೇಶ... ಇವುಗಳೆಲ್ಲವೂ ಮಹಿಳಾ ಬದುಕಿನ ಸಮಸ್ಯೆಗಳನ್ನು ಅವುಗಳದೇ ಆದ ನೆಲೆಯಲ್ಲಿ ತೆರೆದಿಡುತ್ತವೆ. ಪತ್ರಿಕಾ ಸಂಪಾದಕನಾಗಿ ಆಶ್ರಮಗಳಿಗೆ ಪ್ರಚಾರ ಕೊಡುವ ವಿನೋದನಂತಹವರು ಹೆಣ್ಣನ್ನು ಕೇವಲ ಭೋಗದ ವಸ್ತುವಿನಂತೆ ಕಾಣುವ ಪುರುಷ ಮನೋಧರ್ಮವನ್ನು ಸಂಕೇತಿಸುತ್ತಾರೆ.

ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣನ್ನು ಆದರ್ಶ ಗೃಹಿಣಿಯಾಗಿ ಚಿತ್ರಿಸಲಾಗಿದೆ. ಆದರೆ ಈ ಕಾದಂಬರಿಯ ನಾಯಕಿ ಪುಟ್ಟವ್ವ ಕೌಟುಂಬಿಕ ವಲಯದಾಚೆ ತನ್ನ ಬದುಕಿನ ಗುರಿಯನ್ನು ಹರಿಯಬಿಟ್ಟ ಮಹಾತ್ವಾಕಾಂಕ್ಷಿ. ಪುಟ್ಟವ್ವ ತೊಟ್ಟಿಲು ತೂಗಿದವಳೂ ಅಲ್ಲ, ಸೌಟು ಹಿಡಿದವಳೂ ಅಲ್ಲ, ಆವಳು ಆಗಾಗ್ಗೆ ಗೊಣಗುತ್ತಿದ್ದಳು. "ಈ ಸಮಾಜ ಸೇವೆಯಿಂದಾಗಿ ನಳಪಾಕದ ಪದವಿ ನನಗೆ ದಕ್ಕಲಿಲ್ಲ"2 ಎಂದು ಸೀಮಿತ ದೃಷ್ಟಿಕೋನದಿಂದ ಆಚೆಗಿನ ಮಹಿಳಾ ಬದುಕನ್ನು ಅವಲೋಕಿಸಿರುವುದು ನಿರಂಜನರ ಪ್ರಗತಿಶೀಲ ಮನೋಭಾವದ ಸಂಕೇತವಾಗಿ ಕಾಣುತ್ತದೆ.

ಪುಟ್ಟವ್ವನಿಗೆ ಭಾರತೀಯ ಅನಾಥಾಶ್ರಮದ ಚಂದಾ ಹಣದಿಂದ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಅವಳ ಕಷ್ಟದ ದಿನಗಳಿಗೆ ಸ್ಪಂದಿಸಿದ ಮೃದಲಾಬೆನ್ ಜಗದಗಲ ಪುರದ ಧರ್ಮೆಂದ್ರ ಬಾಬಾರಲ್ಲಿಗೆ ಪುಟ್ಟವ್ವನನ್ನು ಕಾಯಕಲ್ಪ ಚಿಕಿತ್ಸೆಗೆ ಕಳಿಸಿಕೊಡುವುದು ಕಾದಂಬರಿಯ ಪ್ರಮುಖ ತಿರುವಾಗಿದೆ. ಅಲ್ಲಿಂದ ಸಾಮಾಜಿಕ ಸೇವಾಕ್ಷೇತ್ರದಿಂದ ರಾಜಕೀಯ ಬದುಕಿಗೆ ಪಾದಾರ್ಪಣೆ ಮಾಡುವ ಪುಟ್ಟವ್ವಳ ಹೊಸ ಬಗೆಯ ಸಾಮರ್ಥ್ಯವನ್ನು ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ. ಜಗದಗಲಪುರದ ಬಾಬಾರನ್ನು ನೋಡಲು ಒಂದೊಂದೇ ಪಾವಟಿಗೆಯನ್ನು ಏರುತ್ತಾ ಅವಳು ದಿಬ್ಬ ಹತ್ತಿದಳು ಎಂಬ ಕಾದಂಬರಿಯ ಸಾಲುಗಳು ಪುಟ್ಟವ್ವನ ಬದುಕಿನ ಮುನ್ನಡೆಯನ್ನು ಸೂಚಿಸುತ್ತವೆ.

ಹಿಂದಿನ ಕಾಲದಿಂದಲೂ ಮಹಿಳೆ ಮತ್ತು ರಾಜಕೀಯಕ್ಕೆ ಹತ್ತಿರದ ನಂಟಿದೆ. ಸ್ವಾತಂತ್ರ್ಯ ಭಾರತದ ಆಡಳಿತ ಸಂದರ್ಭದಲ್ಲಿ ಮಹಿಳೆಯರ ರಾಜಕೀಯ ಪ್ರವೇಶದ ಆಶಯವನ್ನು ಬಾಬಾರ ಈ ಮಾತುಗಳ ಮೂಲಕ ಗಮನಿಸಬಹುದಾಗಿದೆ. "ಇವತ್ತಿನ ಸಮಾಜ ವ್ಯವಸ್ಥೆಯಲ್ಲಿ ರಾಜಕಾರಣ ಅನಿವಾರ್ಯ. ರಾಜ್ಯ ಆಳುವ ಸೂತ್ರಗಳು ಹೆಣ್ಣಿನ ಕೈಯಲ್ಲಿರಬೇಕು. ಆಶ್ರಮದ ಬಾಬಾರಿಂದ ನೀನು ಅಗ್ನಿ, ನೀನು ಮಿಂಚು ಸೌದಾಮಿನಿ, ಹಳೆ ಪುಟ್ಟವ್ವ ನನ್ನಲ್ಲಿ ಲೀನವಾಗಿದ್ದಾಳೆ. ಸೌದಾಮಿನಿಯನ್ನು ನಾನು ಸೃಷ್ಟಿಸಿದ್ದೇನೆ"3 ಎಂಬ

ಆಶೀರ್ವಾದ ಪಡೆದ ಪುಟ್ಟವ್ವನ ಹೊಸ ಹುಟ್ಟು, ಅವಳ ರಾಜಕೀಯ ಬದುಕಿನ ಪ್ರಾಥಮಿಕ ಹೆಜ್ಜೆ, ಅದಕ್ಕಾಗಿ ನಡೆಸುವ ಸಿದ್ಧತೆಗಳು, ದಿನಕಳೆದಂತೆ ಧರ್ಮೇಂದ್ರ ನಿಲಯದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿ ಬೆಳೆಯುವ ಸೌದಾಮಿನಿ ದೇವಿ... ಈ ವಿವರಗಳು ಮಹಿಳಾ ಯಶಸ್ಸಿನ ತೆರೆಮರೆಯಲ್ಲಿ ಕೆಲಸ ಮಾಡುವ ಧಾರ್ಮಿಕ ಸೋಗಲಾಡಿತನವನ್ನು ರಾಜಕೀಯದ ಹಿಂದೆ ಕೆಲಸ ಮಾಡುವ ಮಠಮಾನ್ಯಗಳ ಪ್ರಭಾವಗಳನ್ನು ಬಯಲಿಗೆಳೆಯುವಲ್ಲಿ ಯಶಸ್ವಿಯಾಗಿವೆ.

ದಿಲ್ಲಿಯ ರಾಷ್ಟ್ರೀಯ ಪಕ್ಷದ ಶಿಫಾರಸ್ಸಿನಿಂದ ಪ್ರಾದೇಶಿಕ ಪಕ್ಷದ ಅಧ್ಯಕ್ಷೆಯಾಗಿ ತಾಯಿನಾಡಿಗೆ ಹಿಂದಿರುಗಿದ ಸೌದಾಮಿನಿ ರಾಜ್ಯದ ಪ್ರಥಮ ಮಹಿಳಾ ಮಂತ್ರಿಯಾಗಿ ಭಾಷಣ ಮಾಡುತ್ತಾಳೆ. ಅದನ್ನು ಕೇಳಿದ ಅನಾಥಾಶ್ರಮದ ಹೊಸ ಸಂಚಾಲಕಿ ಸುಲೋಚನಾ ಬಾಯಿ "ಸಾದ್ಯವೇ ಇಲ್ಲ, ಯಾವ ಹೋಲಿಕೆಯು ಇಲ್ಲ. ಈಕೆ ಜನ್ಮತಃ ನಾಯಿಕೆ ಮಾತಾಜಿಯೆ ಸರಿ" 4 ಎಂದು ಅಚ್ಚರಿಗೊಳ್ಳುವುದು. ಮಹಿಳೆಯೊಬ್ಬಳು ಇಚ್ಚಾಶಕ್ತಿಯ ಪ್ರತೀಕವಾಗಿ ಸಾಧನೆಯ ಶಿಖರವನ್ನು ಏರುವ ಸಾಮರ್ಥ್ಯಕ್ಕೆ ಕನ್ನಡಿ ಹಿಡಿದಿದೆ. ಮನೋಬಲ ಪ್ರಬಲವಾಗಿದ್ದಲ್ಲಿ ಸಾಧನೆಗೆ ಸ್ತ್ರೀ ಪುರುಷರೆಂಬ ಅಂತರವಿರುವುದಿಲ್ಲ ಎಂಬ ಅಂಶವನ್ನು ಸಾಬೀತು ಪಡಿಸುತ್ತದೆ.

ಸಮಾಜದ ಗಣ್ಯವ್ಯಕ್ತಿಗಳಾಗಿ ಪುಟ್ಟವ್ವನ ಪೂರ್ವಾಶ್ರಮದ ಉನ್ನತಿ ಅವನತಿಗಳಿಗೆ ಕಾರಣಿಭೂತವಾಗಿದ್ದ ಪುರುಷ ಶಕ್ತಿಗಳು ನಡೆಸುವ ಸಂಚು, ರಾಜಕೀಯವಾಗಿ ಅವಳನ್ನು ಮುಗಿಸುವ ಹಂಬಲ, ಸೌದಾಮಿನಿಯ ಸುಳಿವು ಪತ್ತೆ ಹಚ್ಚಲು ಗೂಢಾಚಾರರ ನೇಮಕ, ವಿರೋಧ ಪಕ್ಷಗಳ ವಿದ್ರೋಹಿ ಚಟುವಟಿಕಗಳು, ಅವಿಶ್ವಾಸ ಗೊತ್ತುವಳಿ, ಅಧಿಕಾರದ ಸುತ್ತ ನಡೆಯುವ ಕುತಂತ್ರಗಳು ಈ ವಿವರಗಳಿಂದ ಕಾದಂಬರಿಯ ಕೊನೆಯ ಭಾಗವು ಪುಟ್ಟವ್ವನ ಮನೋಸ್ಥೈರ್ಯವನ್ನು ದೃಢಪಡಿಸುತ್ತದೆ. ಅಲ್ಲದೆ ಒಂದು ವ್ಯವಸ್ಥೆ ಭ್ರಷ್ಟಾಚಾರಗೊಳ್ಳಲು ಇರುವ ಪೂರಕ ಕಾರಣಗಳು, ಮಂತ್ರಿ ಮಹೋದಯರು ನಡೆಸುವ ಲಾಭಿಗಳ ಮೂಲಕ ಇಡೀ ರಾಜಕೀಯ ವ್ಯವಸ್ಥೆಯ ಹುಳುಕುಗಳನ್ನು ದೃಢಪಡಿಸುತ್ತದೆ.

ಬದುಕಿನ ಪ್ರತಿ ಸಂದರ್ಭಗಳನ್ನು ತನ್ನ ವೈಯಕ್ತಿಕ ಬೆಳವಣಿಗೆಗಾಗಿ ಬಳಸಿಕೊಳ್ಳುವ ಚಾಣಾಕ್ಷೆ ಸೌದಾಮಿನಿ ತನ್ನನ್ನು ಸೇವಾಸದನದಿಂದ ಹೊರಹಾಕುವಲ್ಲಿ ಪ್ರಮುಖ ಪಾತ್ರವಹಿಸಿದ 'ತುತೂರಿ' ಎಂಬ ಪೀತಪತ್ರಿಕೆ ಬಗ್ಗೆ ವಿಚಾರಿಸಿಕೊಳ್ಳುತ್ತಾಳೆ. ಎಲ್ಲರ ಪಾಲಿಗೂ ಮಾತಾಜಿಯಾಗಿ ಗುಪ್ತಾಚಾರ ದಳದ ಮುಖ್ಯಸ್ಥನೊಡನೆ ಆಕೆ "ಸುಲೋಚನಾ ಬಾಯಿಯೆಂಬುವವರು ಕಾರ್ಯದರ್ಶಿಯಾಗಿರೋ ಒಂದು ಅನಾಥಾಶ್ರಮ ಸಹಾಯ ಧನ ಕೇಳಿದೆ. ಅಲ್ಲಿ ಹಣ ಪೋಲಾಗ್ತಿದೇಂತ ಒಂದು ತಳ್ಳಿ ಅರ್ಜಿ ಬಂದಿದೆ. ಸ್ವಲ್ಪ ತನಿಖೆ ನಡೆಸಿ ವರದಿ ಕೊಡಿ. ಸುಮ್ಮಸುಮ್ಮನೆ ಸರ್ಕಾರದ ಹಣ ನೀಡೊದು ನನಗೆ ಇಷ್ಟ ಇಲ್ಲ" 5 ಎನ್ನುವಲ್ಲಿ ತನ್ನನ್ನು ಅವಮಾನಿಸಿದವರ ವಿರುದ್ಧ ಅಧಿಕಾರಾವಧಿಯಲ್ಲಿ ಸೇಡು ತೀರಿಸಿಕೊಳ್ಳುವ ಹಂಬಲವಿದೆ. ಆದರೂ ನಗರದಲ್ಲಿ ಗೌರವ ಸ್ಥಾನ ಪಡೆದಿರುವ ಆಶ್ರಮದ ಬಗ್ಗೆ ವರದಿ ತರಿಸಿ ಒಂದು ಲಕ್ಷ ಮಂಜೂರು ಮಾಡುವ ಔದಾರ್ಯ ಪ್ರದರ್ಶನ ಮಾಡುವುದು ಆಕೆಯ ರಾಜಕೀಯ ನಿಪುಣತೆಗೆ ದ್ಯೋತಕವಾಗಿದೆ. ರಾಜಕೀಯ ಕೌಶಲ್ಯಕ್ಕೆ, ಭ್ರಷ್ಟಾಚಾರಕ್ಕೆ ಸ್ತ್ರೀ ಪುರುಷರೆಂಬ ವ್ಯತ್ಯಾಸವಿಲ್ಲ ಎಂಬ ನೈಜ ಸಂಗತಿಯು ಈ ಮೂಲಕ ಅನಾವರಣಗೊಂಡಿದೆ.

ಸ್ವಾತಂತ್ರ್ಯ ಭಾರತದ ಸಂವಿಧಾನಾತ್ಮಕ ಆಡಳಿತ ವ್ಯವಸ್ಥೆಯ ಜಾರಿಯಲ್ಲಿದ್ದರೂ ಇಂದಿಗೂ ರಾಜಕೀಯ ಕ್ಷೇತ್ರವು ಮಠಮಾನ್ಯಗಳ ಹಿಡಿತದಿಂದ ಮುಕ್ತವಾಗಿಲ್ಲ ಎಂಬ ವಾಸ್ತವ ಚಿತ್ರಣಕ್ಕೆ ಕಾದಂಬರಿಯು ಸಾಕಷ್ಟು ನಿದರ್ಶನವನ್ನು ಒದಗಿಸಿದೆ. ವಿದೇಶಿ ಪ್ರವಾಸ ಕೈಗೊಂಡ ಸಚಿವ ರಂಗಧಾಮನ ಬಳಿ ಪುಟ್ಟವ್ವ ಸ್ವಾಮೀಜಿಯ ಪ್ರಸ್ತಾಪ ಮಾಡುತ್ತಾ "ಸಮಾಜದ ಆರೋಗ್ಯಕ್ಕೆ ಮಂದಿರ, ಮಸೀದಿ, ಇಗರ್ಜಿ, ಗುರುದ್ವಾರ ಹೇಗೆ ಅಗತ್ಯವೋ ಹಾಗೆ ಮಠ. ಸ್ವಾಮೀಜಿ ಹೇಳುವ ಮಾತುಗಳು ಸುಳ್ಳಾಗೋದಿಲ್ಲ. ವಿಜಯಶ್ರಿ ನಿಮ್ಮ ಕೊರಳಿಗೆ ಮಾಲೆ ಹಾಕ್ತಾಳೆ" 6 ಎಂಬಲ್ಲಿ ಭಾರತದಲ್ಲಿ ಧರ್ಮ ಹಾಗೂ ಧಾರ್ಮಿಕ ಮಠಗಳು ರಾಜಕೀಯದ ಮೇಲೆ ತಮ್ಮ ಗಾಢ ಪ್ರಭಾವವನ್ನು ಇಂದಿಗೂ ಬೀರುವುದರ ಮೂಲಕ ರಾಜಕೀಯ ಪರಿಸ್ಥಿತಿಯನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿರುವದರ ಚಿತ್ರಣವು ವ್ಯಕ್ತವಾಗಿದೆ.

ಸಾರ್ವಜನಿಕ ಕ್ಷೇತ್ರಕ್ಕೆ ಪುಟ್ಟವ್ವನನ್ನು ಪರಿಚಯಿಸಿದ್ದ ಗುಜರಾತಿಯ ಹೆಣ್ಣು ಮೃದಲಾಬೆನ್, ಮುಖ್ಯಮಂತ್ರಿ ಪುಟ್ಟವ್ವನನ್ನು ಕಂಡು "ಅಲ್ಲಪುಟ್–ಕ್ಷಮಿಸು–ಸೌದಾ–ಇದು ಕನಸೋ? ಎಚ್ಚರವೋ?" 7 ಎಂದು ಪ್ರತಿಕ್ರಯಿಸುವುದರಲ್ಲಿ ಹಳೆಯ ಪುಟ್ಟವ್ವ ಸೌದಾಮಿನಿಯಾಗಿ ಬೆಳೆದ ಅಚ್ಚರಿಯ ಸಂಗತಿಯು ದಾಖಲಾಗಿದೆ. ಮಹಿಳಾ ಸಾಮರ್ಥ್ಯವು ಈ ಮೂಲಕ ಅಭಿವ್ಯಕ್ತಗೊಂಡಿದೆ.

ಸೌದಾಮಿನಿಯ ರಾಜಕೀಯ ಏಳಿಗೆಯನ್ನು ಸಹಿಸಲಾರದ ಪ್ರತಿಪಕ್ಷದ ನಾಯಕರು, ರಾಜಕೀಯದಲ್ಲಿದ್ದ ಆಕೆಯ ಹಳೆಯ ಒಡನಾಡಿಗಳು ಪೂರ್ವ ಜನ್ಮದ ಅವಳ ವಾಸನೆಯ ಜಾಡು ಹಿಡಿದು ಅಧಿಕಾರಿದಿಂದ ಪದಚ್ಯುತಿಗೊಳಿಸಿ ಜೈಲಿಗೋ, ಮಠಕ್ಕೋ, ಕಳುಹಿಸುವ ಸಂಚು ಮಾಡುವುದು, ಭಿನ್ನ ಮತೀಯ ಚಟುವಟಿಕೆಗಳು ಪಕ್ಷ ಉರುಳಿಸುವ ತಂತ್ರ, ಜೋತಿಷ್ಯದ ಮೊರೆ ಹೋಗುವುದು, ವಿಶ್ವಂಭರನ ಕಿತಾಪತಿ ಪುಟ್ಟವ್ವನ ಹಳೆಯ ಬದುಕಿನ ದಾಖಲೆಗಳ ಫೋಟೊಗಳ ಸಹಿತ ಬರೆದ ಪುಸ್ತಕ, ಸಿ.ಬಿ.ಐ ವರದಿ, ಅವಿಶ್ವಾಸ ಸೂಚನೆ ಸಹಿ ಸಂಗ್ರಹ ಇತ್ಯಾದಿ ವಿವರಗಳೆಲ್ಲವೂ ಪ್ರಸಕ್ತ ರಾಜಕಾರಣದ ರಾಜಕೀಯ ಪ್ರಹಸನಕ್ಕೆ ಜ್ವಲಂತ ನಿದರ್ಶನಗಳಾಗಿವೆ. ಕಾದಂಬರಿಕಾರರು ಸ್ವಾತಂತ್ರೋತ್ತರ ಭಾರತದ ರಾಜಕೀಯ ಸನ್ನಿವೇಶಗಳನ್ನು ಅವಲೋಕಿಸುತ್ತಲೇ ಅಂದಿನ ರಾಜಕೀಯ ವಿದ್ಯಾಮಾನಗಳನ್ನು ಕುರಿತ ಸೂಕ್ಷ್ಮ ವಿಡಂಬನೆಯನ್ನು ಮಾಡಿರುವುದು ಅರ್ಥಪೂರ್ಣವಾಗಿದೆ.

ನಿರಂಜನರು ಕುಟುಂಬ, ಸಮಾಜ, ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಮಹಿಳೆಯ ಪಾತ್ರವನ್ನು ಸಮರ್ಥವಾಗಿ ಗುರುತಿಸಿದ್ದಾರೆ. ಮಹಿಳೆಯ ವ್ಯಕ್ತಿತ್ವದ ಹಲವು ಸಾದ್ಯತೆಗಳನ್ನು ಗ್ರಹಿಸಿದ್ದಾರೆ. ಹಾಗಾಗಿ ಅವರ ಅನೇಕ ಕೃತಿಗಳು ಮಹಿಳೆಯರ ಮನೋಸ್ಥೈರ್ಯಕ್ಕೆ ಪುರಾವೆ ಒದಗಿಸುತ್ತವೆ. ಪುಟ್ಟವ್ವ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಕೊನೆಯವರೆಗೂ ನಡೆಸಿದ

ಹೋರಾಟ ಹಾಗೂ ಅವಳ ಇಚ್ಛಾಶಕ್ತಿಗಳು ಕಾದಂಬರಿಯ ಕೊನೆಯ ಭಾಗದಲ್ಲಿ ಸ್ಫುಟಗೊಳ್ಳುವುದರ ಮುಖಾಂತರ ಹೋರಾಟದ ಮನೋಭಾವಕ್ಕೆ ಕರೆ ನೀಡುವಂತಿವೆ. ಮುಖ್ಯಮಂತ್ರಿ ಸೌದಾಮಿನಿಯಾಗಿ ಅವಳು ಆಡುವ "ಮಾನವ ಶಕ್ತಿಗಿಂತ ಮಿಗಿಲಾದದ್ದು ದೈವೀಶಕ್ತಿ ಅದು ತನ್ನ ಪಾಲಿಗೆ ಹೇರಳವಾಗಿದೆ. ಹೀಗಿರುತ್ತಾ ಮಾನವ ಶಕ್ತಿಯ ಕೈ ಮೇಲಾದೀತೆ? ಇಷ್ಟರಲ್ಲೂ ಹುಲಮಾನವರನ್ನು ಜಯಿಸಬಲ್ಲ ಶಕ್ತಿ ಇಲ್ಲವೇ? ಇದೆ, ಯಾವುದು? ಧನ ಶಕ್ತಿ" 8 ರಾಜಕೀಯದಲ್ಲಿ ಹಣದ ಹೊಳೆ ಹರಿಯುವ ಸಹಜ ಚಿತ್ರಣವು ಇಲ್ಲಿ ದೊರೆಯುತ್ತದೆ. ಅಧಿಕಾರದ ಕೊನೆ ಗಳಿಗೆಯಲ್ಲಿಯೂ ಅನಾಥಾಶ್ರಮ ಅತಿಥಿಗೃಹದ ಉದ್ಘಾಟನಾ ಕಾರ್ಯಕ್ರಮಕ್ಕೆ ಪುಟ್ಟವ್ವ ಹುರುಪಿನಿಂದ ಭಾಗವಹಿಸುತ್ತಾಳೆ. ಕುಟುಂಬದ ಸೀಮಿತ ವಲಯದಲ್ಲಿಯೇ ಶತಶತಮಾನಗಳಿಂದ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ ಸಾಧಾರಣ ಗೃಹಿಣಿಯರ ಪಾತ್ರಕ್ಕಿಂತ ವಿಭಿನ್ನವಾಗಿರುವ ಮಹಿಳಾ ಪಾತ್ರವನ್ನು ಅವಳ ಸಾಮರ್ಥ್ಯವನ್ನು ನಿರಂಜನರು ಈ ಕಾದಂಬರಿಯ ಮೂಲಕ ಸಮರ್ಥವಾಗಿ ಪ್ರತಿಬಿಂಬಿಸಿದ್ದಾರೆ.

ಸಮಾಜದ ಗಣ್ಯವ್ಯಕ್ತಿಯಾಗಿ ತನ್ನನ್ನು ಗುರುತಿಸಿಕೊಳ್ಳುವ ಹಂಬಲದ ಪುಟ್ಟವ್ವ ತನ್ನನ್ನು ಆತ್ಮಾವಲೋಕನಕ್ಕೆ ಒಳಗು ಮಾಡಿಕೊಳ್ಳುವ ರೀತಿ "ಜೀವನದಲ್ಲಿ ಮೊಟ್ಟಮೊದಲು ನಾನು ನಮಸ್ಕಾರ ಪಡೆದುದು ಯಾವಾಗ? ಕೊಟ್ಟವರು ಯಾರು? ಬೇರೆ ಯಾರೋ ಎಂದು ತಪ್ಪು ಗ್ರಹಿಸಿ ತನಗೆ ಕೈ ಕೂಡಿಸಿದಳೋ (ರೋ)? ಹೆಂಗಸು, ಹೆಂಗಸೇ ಅಂತ ತೋರ್ತದೆ. ಆ ಪದ ಕೇಳಿದೊಡನೆ ಜೋಡಿಸಿದ ಕೈಗಳನ್ನು ಕಂಡೊಡನೆ ಅವಳ ಮೈ ಪುಲಕಗೊಂಡಿತ್ತು. ಆ ಮೇಲೆ ಬೀದಿಗಿಳಿದಾಗಲೆಲ್ಲ ನಮಸ್ಕಾರದ ನೀರಿಕ್ಷೆಯಲ್ಲಿರುತ್ತಿದ್ದಳು. ಅದು ಸುಲಭ ಸಾಧ್ಯವಲ್ಲವೆಂದು ಮನವರಿಕೆಯಾದಾಗ ಅರ್ಹರೆಂದು ಕಂಡವರಿಗೆ ತಾನೇ ನಮಸ್ಕರಿಸತೊಡಗಿದಳು. ಆಗ ಪ್ರತಿ ನಮಸ್ಕಾರ ದೊರೆಯುತ್ತಿತ್ತು. ಕ್ರಮೇಣ ಅವಳು ಗಣನೀಯ ವ್ಯಕ್ತಿಯಾದಾಗ ಪ್ರತಿದಿನವೂ ನಮಸ್ಕಾರಗಳು ಹೇರಳವಾಗಿ ಸಿಗತೊಡಗಿದವು. ಒಂದು ದಿವಸ ಕುತೂಹಲದಿಂದ ನಮಸ್ಕಾರಗಳನ್ನು ಎಣಿಸಿದ್ದಳು. ಸೆರಗಿಗೆ ಮನೆ ಸೇರುವ ಹೊತ್ತಿಗೆ ಅಂದು ಒಟ್ಟು ದೊರೆತುದು ನಾಲ್ವತ್ತಾರು. ಈಗ ಸಹಸ್ರಾರು ಸಹಸ್ರ ಸಹಸ್ರವಂದನೆಗಳಿಗೆ ಪ್ರತಿಯಾಗಿ ಒಂದನ್ನು ತಾನು ಕೊಟ್ಟರೆ ಸಾಕು. ಗೋಣು ಆಡಿಸಿದರೂ ಸರಿಯೆ" 9 ಎಂಬಲ್ಲಿ ಸಾರ್ವಜನಿಕ ವಲಯದಲ್ಲಿ ಗುರುತಿಸಿಕೊಳ್ಳಲು ಪುಟ್ಟವ್ವನಿಗಿದ್ದ ಹಪಾಹಪಿತನದ ಜೊತೆಗೆ ಹಂತ ಹಂತವಾಗಿ ಅವಳು ಯಶಸ್ಸಿನತ್ತ ಮುನ್ನಡೆಯುವ ಚಿತ್ರಣವನ್ನು ಕಟ್ಟಿಕೊಡಲಾಗಿದೆ. ಮಹಿಳಾ ವ್ಯಕ್ತಿತ್ವದ ವಿಭಿನ್ನ ಚಿತ್ರಣವು ಇಲ್ಲಿ ದೊರೆಯುತ್ತದೆ.

ರಾಜ್ಯದ ಮೊದಲ ಮಹಿಳಾ ಮಂತ್ರಿ ಎಂದು ಪ್ರಧಾನಿಯಿಂದ ಹೊಗಳಿಸಿಕೊಂಡಿದ್ದ ಪುಟ್ಟವ್ವ ಅಧಿಕಾರದಿಂದ ಇಳಿಯಲೇಬೇಕಾದ ಅನಿವಾರ್ಯ ಸಂದರ್ಭದಲ್ಲಿ ಸಭೆಯನ್ನು ಉದ್ದೇಶಿಸಿ ಆಡುವ ವ್ಯಂಗೋಕ್ತಿಗಳು "ಸ್ವತಂತ್ರ ಭಾರತದಲ್ಲಿ ಬಡ ಪ್ರಾಣಿಗೂ ಉಸಿರಾಡುವ ಹಕ್ಕಿದೆ, ನನಗಿಲ್ಲವಾ? ಮಾತು ಬರ್ತದೆ? ಅದನ್ನು ಆಡುವಂತಿಲ್ಲವಾ? ಕಿಷ್ಕಿಂದೆಯ ಮುಖ್ಯ ಮಂತ್ರಿಯಾದ ಒಂದು ಕಾಲದಲ್ಲಿ ಪುಟ್ಟವ್ವನಾಗಿದ್ದೆ. ಅನಾಥಾಶ್ರಮ ನಡೆಸ್ತಿದ್ದ ಸಮಾಜ ಸೇವಿಕೆ ಪುಟ್ಟವ್ವ! ನಾನೊಬ್ಬಳು ಢಾಕಿನಿ, ಅವರೆಲ್ಲ ದೇವತೆಗಳು ಅಂದುಕೊಂಡಿರಾ? ಅರ್ಧರ್ಧ ಲಕ್ಷಕ್ಕೆ ವ್ಯವಹಾರ ಕುದರಿಸೋಕೆ ಕೆಲ ಶಾಸಕರು ಸಿದ್ಧರಾಗಿದ್ದರು. ಇದೇನಾ ನೀತಿ ಧರ್ಮ? ನಾನು ಅವರನ್ನು ಕೊಳ್ಳಲಿಲ್ಲ" 10 ಎನ್ನವಲ್ಲಿ ನಮ್ಮ ದೇಶದ ಇಡೀ ರಾಜಕೀಯ ವ್ಯವಸ್ಥೆಯ ಹುಳುಕುಗಳನ್ನು ಜಾಲಾಡಿಸುವುದರ ಜೊತೆಗೆ ಪುಟ್ಟವ್ವನ ಬದಲಾದ ಮನೋಧರ್ಮವನ್ನು ಸೆರೆಹಿಡಿಯಲಾಗಿದೆ. ಅನಾದಿಕಾಲದಿಂದಲೂ ನೀತಿ, ಧರ್ಮ, ಶೀಲ ಮೊದಲಾದ ಮೌಲ್ಯಗಳನ್ನು ಹೆಣ್ಣಿಗೆ ಆರೋಪಿಸಿ ಸಮಾಜದ ಭ್ರಷ್ಟ ವ್ಯವಸ್ಥೆ ಯೊಳಗೆ ತಾವು ಶಾಮೀಲಾಗಿದ್ದರೂ ಸಭ್ಯತೆಯ ಮುಖವಾಡದಲ್ಲಿ ಮೆರೆಯುವ ಪುರುಷ ಜಗತ್ತಿನ ಹುನ್ನಾರಗಳನ್ನು ಕಾದಂಬರಿಕಾರರು ಇಲ್ಲಿ ಬಯಲಿಗೆಳೆದಿದ್ದಾರೆ.

ರಾಜಕೀಯ ವಿಷವರ್ತುಲದ ಒಳಗೆ ಸಿಲುಕಿ ಅದರಿಂದ ಹೊರಬರಲಾಗದೆ ಆತ್ಮಹತ್ಯೆಗೆ ಶರಣಾಗುವ ರೀತಿಯಲ್ಲಿಯೂ ಪುಟ್ಟವ್ವ ಘನತೆಯನ್ನು ಮೆರೆಯುತ್ತಾಳೆ. ಅವಳ ಬದುಕಿನ ಮಹಾತ್ವಾ ಕಾಂಕ್ಷೆಗೆ ಕಾರಣವಾದ ಮಠದಲ್ಲಿ ತಯಾರಾದ ಹಾವಿನ ವಿಷದ ಗುಳಿಗೆಯನ್ನು ಸೇವಿಸಿ ಪ್ರಾಣ ಬಿಡುತ್ತಾಳೆ. ಅದರಲ್ಲಿಯೇ ಸಾರ್ಥಕತೆಯನ್ನು ಹೊಂದುತ್ತಾಳೆ. ಅವಳ ಮರಣದ ಸಂದರ್ಭದಲ್ಲಿ ರಾಜಕೀಯ ಮುಖಂಡರುಗಳು ಸೂಚಿಸುವ ಸಂತಾಪದ ನುಡಿಗಳು ರಾಜಕೀಯ ವಿಡಂಬನೆಯ ಪರಮಾವಧಿ ಎನಿಸುತ್ತವೆ. ಭ್ರಷ್ಟರಾಜಕಾರಿಣಿಗಳ ಆಷಾಡಭೂತಿ ವ್ಯಕ್ತಿತ್ವವು ಕೇಂದ್ರ ಸಚಿವ ನಕುಲ ದೇವನ ಮಾತುಗಳಲ್ಲಿ ಅಡಕಗೊಂಡಿದೆ. "ದುಡುಕುಬುದ್ದಿ, ದುರ್ಬುದ್ಧಿಯಲ್ಲ ಎಲ್ಲದಕ್ಕೂ ಅವಸರ. ಇನ್ನೇರಡು ಮೂರು ಮಹಾಚುನಾವಣೆ ಕೂಡ ನೋಡಬಹುದಿತ್ತು. ಹೊರಟೇ ಹೋದ್ಳು" 11 ಹಾಗೂ ವಿಶ್ವಂಭರನ "ಬಾಂಧವರೇ! ಹಿಂದೆಂದೂ ಅನುಭವಿಸದ ಸಂಕಟದಿಂದ ನಾನು ಬಾಧಿತನಾಗಿದ್ದೇನೆ. ಕಂಠ ಉಮ್ಮಳಿಸುತ್ತಿದೆ. ಅಶ್ರು ಭರದಿಂದ ದೃಷ್ಠಿ ಜಡವಾಗಿದೆ. ಇನ್ನು ಹೆಚ್ಚು... ನಮ್ಮ ರಾಷ್ಟ್ರ ಪಕ್ಷದ ಹಿರಿಯ ಹುದ್ದರಿಗೆ, ನಮ್ಮ ಮಾಜಿ ಮುಖ್ಯಮಂತ್ರಿಗೆ ಇದೋ ಶೋಕ ತಪ್ತ ವಿದಾಯ" 12 ಎಂಬುದಂತೂ ತೀರಾ ವಿಷಾದನೀಯವಾಗಿದೆ. ಅಧಿಕಾರವಿದ್ದಾಗ ಕಾಲು ಎಳೆಯುವ, ಸತ್ತ ನಂತರ ಶೋಕಿಸುವ ರಾಜಕೀಯ ಇಬ್ಬಂದಿತನಕ್ಕೆ ಈ ಸನ್ನಿವೇಶವು ಜೀವಂತ ಸಾಕ್ಷಿಯಾಗಿ ನಿಲ್ಲುತ್ತದೆ. ಈ ಕಾದಂಬರಿಯ ಮೂಲಕ ನಿರಂಜನರು ಸ್ವತಂತ್ರ ಭಾರತದಲ್ಲಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದ ಮೊದಲ ತಲೆಮಾರಿನ ಮಹಿಳೆಯ ಅನುಭವಗಳನ್ನು, ಮಹಿಳಾ ರಾಜಕೀಯ ಯಶಸ್ಸಿನ ಮುನ್ನೋಟವನ್ನು ಸಾಕ್ಷಾತ್ಕರಿಸಿದ್ದಾರೆ.

**ಅಡಿಟಿಪ್ಪಣಿ;**


1) ನಿರಂಜನ: ಮಿಂಚು: 1987 ಐಬಿಹೆಚ್, ಬೆಂಗಳೂರು.

2) ಪೂರ್ವೋಕ್ತ: ಪುಟ: 22-23

3) ಪೂರ್ವೋಕ್ತ: ಪುಟ: 4-38
4) ಪೂರ್ವೋಕ್ತ: ಪುಟ: 49
5) ಪೂರ್ವೋಕ್ತ: ಪುಟ: 140
6) ಪೂರ್ವೋಕ್ತ: ಪುಟ: 158
7) ಪೂರ್ವೋಕ್ತ: ಪುಟ: 159
8) ಪೂರ್ವೋಕ್ತ: ಪುಟ: 214
9) ಪೂರ್ವೋಕ್ತ: ಪುಟ: 227
10) ಪೂರ್ವೋಕ್ತ: ಪುಟ: 242
11) ಪೂರ್ವೋಕ್ತ: ಪುಟ: 254
12) ಪೂರ್ವೋಕ್ತ: ಪುಟ: 256